ಮಡಿಕೇರಿ ನಗರದ ವಿದ್ಯುತ್ ಸಂಪರ್ಕ ಅಭಿವೃದ್ಧಿ

1833(961); ಶ್ರೀ ಬೋಪಯ್ಯ ಕೆ.ಜಿ. (ವಿರಾಜಪೇಟೆ)

ಅ) ಮಡಿಕೇರಿ ನಗರದ ವಿದ್ಯುತ್ ಸಂಪರ್ಕ ಅಭಿವೃದ್ಧಿಗಾಗಿ ಆರ್.ಎ.ಪಿ.ಡಿ.ಆರ್.ಪಿ. ಯೋಜನೆಯಡಿ 2010–12ರ ನಂತರದಲ್ಲಿ ಎಷ್ಟು ಹಣ ಮಂಜೂರಾಗಿದೆ;

ಆ) ಕಾಮಗಾರಿ ಪೂರ್ಣಗೊಂಡಿದೆಯೇ; ಕಾಮಗಾರಿ ಪ್ರಾರಂಭಿಸದೇ ಇದ್ದಲ್ಲಿ ಕಾರಣವೇನು; (ವಿವರಗಳನ್ನು ಒದಗಿಸುವುದು)?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಮಡಿಕೇರಿ ನಗರದ ವಿದ್ಯುತ್ ಸಂಪರ್ಕ ಅಭಿವೃದ್ಧಿಗಾಗಿ ಆರ್.ಎ.ಪಿ.ಡಿ.ಆರ್.ಪಿ. (ವಿದ್ಯುತ್ ವಿತರಣಾ ಜಾಲವನ್ನು ಬಲಪಡಿಸುವಿಕೆ) ಯೋಜನೆಯಡಿ ₹ 4.13 ಕೋಟಿಗಳನ್ನು ಮಂಜೂರು ಮಾಡಲಾಗಿರುತ್ತದೆ.

ಆ) ಮಡಿಕೇರಿ ನಗರದ ವಿದ್ಯುತ್ ಸಂಪರ್ಕ ಅಭಿವೃದ್ಧಿಗಾಗಿ ಆರ್.ಎ.ಪಿ.ಡಿ.ಆರ್.ಪಿ. ಯೋಜನೆಯಡಿ ಕಾಮಗಾರಿಯನ್ನು ಈಗಾಗಲೇ ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿರುತ್ತದೆ. ಸದರಿ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ನೋಟೀಸ್ ನೀಡಲಾಗಿದೆ.

ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಬೆಳೆಗಾರರಿಗೆ ಬರಬೇಕಾದ ಬಾಕಿ ಹಣ

1835(955); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ರಾಜ್ಯದ ಸರ್ಕಾರಿ, ಸಹಕಾರಿ ಮತ್ತು ಖಾಸಗಿ ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಸರಬರಾಜು ಮಾಡಿದ ಕಬ್ಬು ಬೆಳೆಗಾರರಿಗೆ ಬರಬೇಕಾದ ಬಾಕಿ ಹಣ ಎಷ್ಟು; ಪ್ರತಿಯೊಂದು ಕಾರ್ಖಾನೆವಾರು ವಿವರ ನೀಡುವುದು; ಈ ಬಾಕಿಯನ್ನು ಪಾವತಿಸಲು ಕೈಗೊಂಡಿರುವ ಕ್ರಮಗಳು ಯಾವುದು;

ಆ) ಕಾರ್ಖಾನೆಗಳು ಸಕಾಲದಲ್ಲಿ ಕಬ್ಬು ಬೆಳೆಗಾರರಿಗೆ ಕಬ್ಬು ಸರಬರಾಜು ಮಾಡಿದ ಬಗ್ಗೆ ಹಣ ಪಾವತಿ ಮಾಡದೇ ಇರುವುದರಿಂದ ಶೂನ್ಯ ಬಡ್ಡಿದರದಲ್ಲಿ ಸಾಲ ಪಡೆದ ಕಬ್ಬು ಬೆಳೆಗಾರರು, ಸಕಾಲದಲ್ಲಿ ಸಾಲ ತಿರಿಸದೇ ಹೆಚ್ಚಿನ ಬಡ್ಡಿ ಪಾವತಿ ಮಾಡಬೇಕಾದ ಹಾಗೂ ಹೊಸದಾಗಿ ಶೂನ್ಯ ಬಡ್ಡಿ ದರದಲ್ಲಿ ಸಾಲ ಪಡೆಯಲು ಆಗದೇ ಇರುವ ಪರಿಸ್ಥಿತಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇದಕ್ಕೆ ಸರ್ಕಾರ ಪರಿಹಾರೋಪಾಯಗಳನ್ನು ರೂಪಿಸುವುದೇ?

ಶ್ರೀ ಹೆಚ್.ಎಸ್. ಮಹದೇವಪ್ಪ ಪ್ರಸಾದ್ (ಸಹಕಾರ ಮತ್ತು ಸಕ್ಕರೆ ಸಚಿವರು)

ಅ) ರಾಜ್ಯದ ಸರ್ಕಾರಿ, ಸಹಕಾರಿ ಮತ್ತು ಖಾಸಗಿ ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಸರಬರಾಜು ಮಾಡಿದ ಕಬ್ಬು ಬೆಳೆಗಾರರಿಗೆ ಬರಬೇಕಾದ ಬಾಕಿ ಹಣದ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಲಾಗಿದೆ.

ರಾಜ್ಯದ ಉತ್ತರ ಮತ್ತು ದಕ್ಷಿಣ ಭಾಗದ ಕಾರ್ಖಾನೆಗಳ ಸಕ್ಕರೆ ಇಳುವರಿ ಪ್ರಮಾಣವನ್ನು ಹಾಗೂ 2013–14ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ನೀಡಿದ ಕಬ್ಬು ಖರೀದಿ, ರಸ್ತೆ ಕರ, ಮೌಲ್ಯವರ್ಧಿತ ತೆರಿಗೆ ವಿನಾಯಿತಿಯನ್ನು ಗಮದಲ್ಲಿಟ್ಟುಕೊಂಡು, 2013–14ನೇ ಸಾಲಿಗೆ ಸಂಬಂಧಿಸಿದಂತೆ ದಕ್ಷಿಣ ಕರ್ನಾಟಕ ಭಾಗಕ್ಕೆ ಎಕ್ಸ್‌ಗೇಟ್ ದರದಲ್ಲಿ ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ ₹ 2500/– ಮತ್ತು ಉತ್ತರ ಕರ್ನಾಟಕ ಭಾಗಕ್ಕೆ ಎಕ್ಸ್‌ಫೀಲ್ಡ್ ದರದಲ್ಲಿ ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ ₹ 2500/– ಅನ್ನು ನಿಗದಿಪಡಿಸಿ ದಿನಾಂಕ 23/11/2013 ರಂದು ಅಧಿಸೂಚನೆ ಹೊರಡಿಸಿದೆ.

2013–14ನೇ ಸಾಲಿನಲ್ಲಿ ಒಟ್ಟು 60 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸಿರುತ್ತವೆ. ಕಬ್ಬು ನಿಯಂತ್ರಣ ಮಂಡಳಿಯ ನಿರ್ಣಯದಂತೆ ಹೊರಡಿಸಿರುವ ಅಧಿಸೂಚನೆಯಂತೆ ಈ ಕೆಳಕಾಣಿಸಿದ 4 ಸಕ್ಕರೆ ಕಾರ್ಖಾನೆಗಳು ರೈತರ ಬಾಕಿಯನ್ನು ಪೂರ್ಣವಾಗಿ ಪಾವತಿಸಿರುತ್ತವೆ.

1) ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್, ಭದ್ರಾವತಿ

2) ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ

3) ಬನ್ನಾರಿ ಅಮ್ಮನ್ ಶುಗರ್ಸ್ ಲಿಮಿಟೆಡ್, ನಂಜನಗೂಡು

4) ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಪಾಂಡವಪುರ, ಮಂಡ್ಯ ಜಿಲ್ಲೆ

2013–14ನೇ ಸಾಲಿಗೆ ಪ್ರತಿ ಮೆ. ಟನ್ ಕಬ್ಬಿಗೆ ₹ 2500/– ದರ ನಿಗದಿಪಡಿಸಿದ ಕ್ರಮವನ್ನು ಪ್ರಶ್ನಿಸಿ ಕೆಲವು ಸಕ್ಕರೆ ಕಾರ್ಖಾನೆಗಳು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ (ಸಂಖ್ಯೆ 54865–67/2013) ದಾಖಲಿಸಿದ್ದವು. ಮಾನ್ಯ ನ್ಯಾಯಾಲಯವು ದಿನಾಂಕ 11/12/2013 ರಂದು ತಡೆಯಾಜ್ಞೆ ನೀಡಿ ಸರ್ಕಾರವು ಸಕ್ಕರೆ ಕಾರ್ಖಾನೆಗಳ ಮತ್ತು ರೈತರ ಜೊತೆ ಸಭೆ ನಡೆಸಿ ಸೂಕ್ತ ತೀರ್ಮಾನ ಕೈಗೊಳ್ಳುವಂತೆ ಹಾಗೂ ಅಲ್ಲಿಯವರೆಗೆ ಯಾವುದೇ ಒತ್ತಾಯದ ಕ್ರಮ ಕೈಗೊಳ್ಳಬಾರದೆಂದು ಸರ್ಕಾರಕ್ಕೆ ನಿರ್ದೇಶಿಸಿತ್ತು.

ಅದರಂತೆ ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 19/12/2013 ಮತ್ತು 28/1/2013ರಂದು ಸಂಧಾನ ಸಭೆ ನಡೆದಿದ್ದು, ಸಂಧಾನ ಸಭೆಗಳು ವಿಫಲಗೊಂಡಿರುತ್ತವೆ. ಈ ಅಂಶವನ್ನು ಮಾನ್ಯ ನ್ಯಾಯಾಲಯ ಗಮನಕ್ಕೆ ತರಲಾಯಿತು, ಹಾಗೂ ಸಕ್ಕರೆ ನಿಯಂತ್ರಣ ಆದೇಶ, 1966ರ ಕಲಂ 3(3ಎ) ಅಡಿ ಕಬ್ಬು ಬಿಲ್ಲು ಬಾಕಿ ವಸೂಲಾತಿ

ಮಾಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿತ್ತು. ಅದರಂತೆ ಜಿಲ್ಲಾಧಿಕಾರಿಗಳು ನೋಟೀಸು ಜಾರಿಗೊಳಿಸಿದ್ದರು.

ಮೇಲ್ಕಂಡಂತೆ ನೋಟೀಸು ಪ್ರಕ್ರಿಯೆಯನ್ನು ಪ್ರಶ್ನಿಸಿ 13 ಸಕ್ಕರೆ ಕಾರ್ಖಾನೆಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪುನಃ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ 22/5/2014ರಂದು ಮಧ್ಯಂತರ ಆದೇಶ ನೀಡಿ ಎಫ್.ಆರ್.ಪಿ. ಪಾವತಿಸಿರುವಂತಹ ಕಾರ್ಖಾನೆಗಳ ವಿರುದ್ಧ ಒತ್ತಾಯಪೂರ್ವಕ ಕ್ರಮ ಜರುಗಿಸಬಾರದೆಂದು, ಹಾಗೂ ಎಫ್.ಆರ್.ಪಿ. ಪಾವತಿಸದೇ ಇರುವಂತಹ ಕಾರ್ಖಾನೆಗಳಿಗೆ ಈ ಆದೇಶ ಅನ್ವಯವಾಗುವುದಿಲ್ಲವೆಂದು ತಿಳಿಸಿತ್ತು.

ಈ ಹಿನ್ನೆಲೆಯಲ್ಲಿ ಎಫ್.ಆರ್.ಪಿ. ಗಿಂತ ಕಡಿಮೆ ಹಣ ಪಾವತಿಸಿದ 18 ಕಾರ್ಖಾನೆಗಳು ರೈತರಿಗೆ ಕೊಡಬೇಕಾದ ಬಾಕಿ ಮೊತ್ತವನ್ನು ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡಲು ಜಿಲ್ಲಾಧಿಕಾರಿಗಳಿಗೆ ವಸೂಲಾತಿ ಪ್ರಮಾಣ ಪತ್ರವನ್ನು ದಿನಾಂಕ 21/6/2014ರಂದು ನೀಡಲಾಗಿತ್ತು.

ನೋಟೀಸು ನೀಡಲಾಗಿದ್ದ 18 ಕಾರ್ಖಾನೆಗಳ ಪೈಕಿ 15 ಕಾರ್ಖಾನೆಗಳು ಎಫ್.ಆರ್.ಪಿ. ದರವನ್ನು ರೈತರಿಗೆ ಪಾವತಿಸಿದ್ದು, ಈ ಕೆಳಕಾಣಿಸಿದ ಮೂರು ಸಕ್ಕರೆ ಕಾರ್ಖಾನೆಗಳು ಎಫ್.ಆರ್.ಪಿ. ದರ ಪಾವತಿಸಿರಲಿಲ್ಲ.

1) ಘಟಪ್ರಭಾ ಸಸಕಾ, ಗೋಕಾಕ್, ಬೆಳಗಾವಿ ಜಿಲ್ಲೆ – ಬಾಕಿ ಮೊತ್ತ ₹ 639 ಲಕ್ಷ

2) ಶಿವಸಾಗರ್ ಶುಗರ್ಸ್, ಉದುಪುಡಿ, ಬೆಳಗಾವಿ ಜಿಲ್ಲೆ – ಬಾಕಿ ಮೊತ್ತ ₹ 2029 ಲಕ್ಷ

3) ಭವಾನಿ ಶುಗರ್ಸ್, ಬರೂರು, ಬೀದರ್ ಜಿಲ್ಲೆ – ಬಾಕಿ ಮೊತ್ತ ₹ 233 ಲಕ್ಷ

ನ್ಯಾಯಯುತ ಹಾಗೂ ಲಾಭದಾಯಕ ಬೆಲೆ (ಎಫ್.ಆರ್.ಪಿ)ಯಂತೆ ಬಾಕಿ ಉಳಿಸಿಕೊಂಡಿರುವ ಮೇಲಿನ ಮೂರು ಸಕ್ಕರೆ ಕಾರ್ಖಾನೆಗಳಿಂದ ಬಾಕಿ ಮೊಬಲಗನ್ನು ಭೂಕಂದಾಯ ಬಾಕಿ ಎಂದು ವಸೂಲು ಮಾಡಿ ರೈತರಿಗೆ ಪಾವತಿಸಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸಕ್ಕರೆ ನಿರ್ದೇಶನಾಲಯದಿಂದ ವಸೂಲಾತಿ ಪ್ರಮಾಣ ಪತ್ರ ಹೊರಡಿಸಲಾಗಿದೆ. ಜಿಲ್ಲಾಧಿಕಾರಿಗಳು ಕಾರ್ಖಾನೆಗಳಿಂದ ಬಾಕಿ ವಸೂಲು ಮಾಡಲು ಕ್ರಮ ಕೈಗೊಂಡಿರುತ್ತಾರೆ.

ಅದಕ್ಕೆ ಸಂಬಂಧಪಟ್ಟಂತೆ ಮಾಹಿತಿ ಈ ಕೆಳಕಂಡಂತೆ ಇರುತ್ತದೆ:

- ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯ ಕೆಲವು ಉಪಕರಣಗಳು ಮತ್ತು ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದು ಹರಾಜು ದಿನಾಂಕ ನಿಗದಿಪಡಿಸಲಾಗಿತ್ತು. ಹರಾಜಿನಲ್ಲಿ ಯಾರೂ ಭಾಗವಹಿಸದ ಕಾರಣ ಹರಾಜನ್ನು ಮುಂದೂಡಲಾಗಿದೆ. ಈಗ ಕಾರ್ಖಾನೆಯವರು ಎಫ್ಆರ್‌ಪಿ ದರವನ್ನು ಪೂರ್ಣ ಪಾವತಿಸಿ ಕಾರ್ಖಾನೆಯನ್ನು ಪ್ರಾರಂಭಿಸಿರುತ್ತಾರೆ.

- ಶಿವಸಾಗರ ಸಕ್ಕರೆ ಕಾರ್ಖಾನೆಯಲ್ಲಿ ಬಾಕಿ ಇದ್ದ ಸುಮಾರು 9.00 ಕೋಟಿ ರೂ. ಮೌಲ್ಯದ ಸಕ್ಕರೆ ದಾಸ್ತಾನಿನಲ್ಲಿ 5.00 ಕೋಟಿ ಮೌಲ್ಯದ ಸಕ್ಕರೆಯನ್ನು ಸರಕಾರ ವಶಕ್ಕೆ ಪಡೆದು ಸಾರ್ವಜನಿಕ ವಿತರಣೆ ವ್ಯವಸ್ಥೆಯಲ್ಲಿ ಬಳಸಿಕೊಂಡು, ರೈತರಿಗೆ ಹಣ ಪಾವತಿಸಲಾಗಿದೆ. ಇನ್ನುಳಿದ 4 ಕೋಟಿ ರೂ. ಮೌಲ್ಯದ ಸಕ್ಕರೆಯನ್ನು ಕಾರ್ಖಾನೆಯವರೇ ಮಾರಾಟ ಮಾಡಿ ರೈತರ ಬಾಕಿ ಪಾವತಿಸಿ ಕಾರ್ಖಾನೆ ಪ್ರಾರಂಭಿಸಿರುತ್ತಾರೆ.

- ಭವಾನಿ ಶುಗರ್ಸ್ ಸಕ್ಕರೆ ಕಾರ್ಖಾನೆಯವರು ಬಾಕಿ ಇದ್ದ ₹ 3.76 ಕೋಟಿಯಲ್ಲಿ 2.95 ಕೋಟಿ ರೈತರಿಗೆ ಪಾವತಿಸಿ, ಬಾಕಿ ₹ 81 ಲಕ್ಷ ಇದ್ದು ವಸೂಲಾತಿ ಕ್ರಮ ಜಾರಿಯಲ್ಲಿದೆ.

ನಂತರ ದಿನಾಂಕ 6/11/2014ರ ಆದೇಶದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 11/12/2014ರ ತಡೆಯಾಜ್ಞೆಯನ್ನು ತೆರವುಗೊಳಿಸಿ ಸರ್ಕಾರದ ಕ್ರಮ, ಅಂದರೆ ಸರ್ಕಾರವು ನಿಗಧಿಪಡಿಸಿದ್ದ ಕಬ್ಬಿನ ದರವನ್ನು ಎತ್ತಿ ಹಿಡಿದಿರುತ್ತದೆ. ಅದರಂತೆ 2013–14ನೇ ಸಾಲಿಗೆ ರೈತರಿಗೆ ಪ್ರತಿ ಟನ್‌ಗೆ ₹ 2500/–ರಂತೆ ಹಣ ಪಾವತಿಸದಿರುವ 56 ಸಕ್ಕರೆ ಕಾರ್ಖಾನೆಗಳಿಗೆ ದಿನಾಂಕ 13/11/2014 ರಂದು ನೋಟೀಸ್ ನೀಡಿ, ಬಾಕಿ ಇರುವ ಮೊತ್ತವನ್ನು ಪಾವತಿಸುವಂತೆ ಸೂಚಿಸಲಾಗಿತ್ತು.

ಮಾನ್ಯ ಉಚ್ಚನ್ಯಾಯಾಲಯದ ಆದೇಶದ ನಂತರ ಕಬ್ಬು ಬೆಲೆ ಬಾಕಿ ಉಳಿಸಿಕೊಂಡಿದ್ದ 56 ಸಕ್ಕರೆ ಕಾರ್ಖಾನೆಗಳಿಗೆ ನೋಟೀಸ್ ನೀಡಿದ ನಂತರ ಕಾರ್ಖಾನೆಗಳು ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಒಕ್ಕೂಟದ ಮೂಲಕ (ಸಿಸ್ಮಾ) ಬಾಕಿ ಇರುವ ಕಬ್ಬಿನ ಬೆಲೆಯನ್ನು ಪಾವತಿಸಲು ಇರುವ ಅಸಹಾಯಕತೆಯನ್ನು ಹಾಗೂ ಇದರಿಂದಾಗಿ 2014–15ನೇ ಸಾಲಿನ ಕಬ್ಬು ನುರಿಸುವ ಕಾರ್ಯ ಪ್ರಾರಂಭಿಸಲು ಇರುವ ತೊಂದರೆಯನ್ನು ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ದಿನಾಂಕ 25/11/2014 ರಂದು ಕಾರ್ಖಾನೆಗಳ ಮಾಲೀಕರೊಂದಿಗೆ ಸಭೆ ನಡೆಸಿ ಚರ್ಚಿಸಲಾಗಿರುತ್ತದೆ.

ಮಾನ್ಯ ಉಚ್ಚನ್ಯಾಯಾಲಯದ ಆದೇಶದ ನಂತರ ಕಬ್ಬು ಬೆಲೆ ಬಾಕಿ ಉಳಿಸಿಕೊಂಡಿದ್ದ 56 ಸಕ್ಕರೆ ಕಾರ್ಖಾನೆಗಳಿಗೆ ನೋಟೀಸ್ ನೀಡಿದ ನಂತರ ಕಾರ್ಖಾನೆಗಳು ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಒಕ್ಕೂಟದ ಸಭೆಯಲ್ಲಿ ಭಾಗವಹಿಸಿದ್ದ ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳು, ಹಾಲಿ ಕಾರ್ಖಾನೆಗಳಲ್ಲಿ ರೈತರಿಗೆ ಪಾವತಿಸಲು ನಗದು ಲಭ್ಯವಿರುವುದಿಲ್ಲ, ಮುಂದಿನ ಹಂಗಾಮಿನಲ್ಲಿ ರೈತರಿಗೆ ಹಣ ನೀಡಲು ಹಾಗೂ 2013–14ರ ಬಾಕಿ ಹಣ ಪಾವತಿಗಾಗಿ ಕಾರ್ಖಾನೆಗಳಲ್ಲಿ ಸಕ್ಕರೆ ದಾಸ್ತಾನು ಕೂಡ ಇರುವುದಿಲ್ಲ, ಕಾರ್ಖಾನೆಗಳು ಈಗಾಗಲೇ ಇರುವ ದಾಸ್ತಾನಿನ ಮೇಲೆ ಹಣಕಾಸು ಸಂಸ್ಥೆಗಳು/ಬ್ಯಾಂಕುಗಳಿಂದ ಸಾಲ ಪಡೆದಿದ್ದು ಯಾವುದೇ ಬ್ಯಾಂಕುಗಳು ಈ ಹಂತದಲ್ಲಿ ಕಾರ್ಖಾನೆಗಳಿಗೆ

ಪುನಃ ಸಾಲ ನೀಡಲು ಮುಂದೆ ಬರುತ್ತಿಲ್ಲ ಎಂದು ತಿಳಿಸಿ, ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸರ್ಕಾರವು ಕಾರ್ಖಾನೆಗಳಿಗೆ ಸಹಾಯ ಹಸ್ತ ನೀಡುವಂತೆ ವಿನಂತಿಸಿದರು.

ಸಭೆಯಲ್ಲಿ ಮೇಲಿನ ವಿಷಯದ ಕುರಿತು ದೀರ್ಘವಾಗಿ ಚರ್ಚಿಸಿದ ನಂತರ ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ ₹ 2500 ಪೈಕಿ ₹ 2100 ಅನ್ನು ದಿನಾಂಕ 30/11/2014 ರೊಳಗೆ ಕಡ್ಡಾಯವಾಗಿ ಪಾವತಿಸಬೇಕು, ಕಾರ್ಖಾನೆ ಪ್ರಾರಂಭವಾದ ನಂತರ ಒಂದು ತಿಂಗಳ ಅವಧಿಯೊಳಗೆ ಪ್ರತಿ ಮೆ. ಟನ್‌ಗೆ ₹ 200 ಪಾವತಿಸಬೇಕು, ಉಳಿದ ₹ 200 ಗಳನ್ನು ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ಕಾರ್ಖಾನೆಯವರಿಗೆ ನೀಡಲಾಗುವ ತೆರಿಗೆ ವಿನಾಯತಿಯನ್ನು ಬಳಸಿಕೊಂಡು ಕಂತುಗಳಲ್ಲಿ ಪಾವತಿಸಲು ಅವಕಾಶ ನೀಡುವುದಾಗಿ ತಿಳಿಸಲಾಯಿತು.

ರೈತರಿಗೆ ಶೀಘ್ರವಾಗಿ ಹಣ ಪಾವತಿಸಲು ಕಾರ್ಖಾನೆಗಳು ಮುಂದೆ ಬಂದಲ್ಲಿ ಅಂತಹ ಕಾರ್ಖಾನೆಗಳಿಗೆ ಸರಕಾರವು ಮುಂದಿನ ಮೂರು ವರ್ಷಗಳಲ್ಲಿ, ಅಂದರೆ 2014–15, 2015–16 ಮತ್ತು 2016–17 ರಲ್ಲಿ ಕಬ್ಬು ಖರೀದಿ ತೆರಿಗೆ, ಮೌಲ್ಯವರ್ಧಿತ ತೆರಿಗೆ ಮತ್ತು ರಸ್ತೆ ಕರದಿಂದ ವಿನಾಯಿತಿ ನೀಡಲಾಗುವುದು. ಈ ವಿನಾಯಿತಿಯು ರೈತರಿಗೆ ಸರಿಯಾದ ಸಮಯದೊಳಗೆ ಹಣ ಪಾವತಿಸಲು ಕ್ರಮ ಕೈಗೊಳ್ಳುವ ಮತ್ತು ದಿನಾಂಕ 30/11/2014 ರೊಳಗೆ ಕಬ್ಬು ನುರಿಸುವ ಕಾರ್ಯ ಪ್ರಾರಂಭಿಸುವಂತಹ ಕಾರ್ಖಾನೆಗಳಿಗೆ ಮಾತ್ರ ಅನ್ವಯವಾಗುತ್ತದೆಂದು ತಿಳಿಸಲಾಯಿತು.

ಒಂದು ವೇಳೆ ಸರ್ಕಾರವು ನಿಗಧಿಪಡಿಸಿದಂತೆ ಕಬ್ಬು ದರವನ್ನು ಪಾವತಿಸಲು ವಿಫಲರಾಗುವ ಎಲ್ಲಾ ಸಕ್ಕರೆ ಕಾರ್ಖಾನೆಗಳಿಂದ ಬಾಕಿ ಮೊತ್ತವನ್ನು ಭೂಕಂದಾಯ ಬಾಕಿ ಎಂದು ವಸೂಲು ಮಾಡಿ ರೈತರಿಗೆ ಪಾವತಿಸಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಮೂಲಕ ಕ್ರಮ ಕೈಗೊಳ್ಳಲಾಗುವುದು.

ಈ ಮೇಲಿನಂತೆ ಕಬ್ಬಿನ ಬೆಲೆಯನ್ನು ರೈತರಿಗೆ ಪಾವತಿಸುವ ಸಲುವಾಗಿ ಸರ್ಕಾರವು ಕ್ರಮಗಳನ್ನು ಕೈಗೊಂಡಿರುತ್ತದೆ.

ಆ) 2013–14 ನೇ ಸಾಲಿನಲ್ಲಿ ರಾಜ್ಯದ ಒಟ್ಟು 590773 ರೈತರು ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿರುತ್ತಾರೆ. ಈ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ಒಟ್ಟು 38314278 ಮೆ.ಟನ್ ಕಬ್ಬು ನುರಿಸಿದ್ದು ರೈತರಿಗೆ ಪ್ರತಿ ಮೆ.ಟನ್ ಕಬ್ಬಿಗೆ ₹ 2500/– ರ ದರದಲ್ಲಿ ಒಟ್ಟು ₹ 9578.56 ಕೋಟಿ ಕಬ್ಬು ಬಿಲ್ಲು ಪಾವತಿಸಬೇಕಾಗಿದೆ. ಈ ₹ 7853.58 ಕೋಟಿ ಪಾವತಿಸಿದ್ದು, ₹ 1724.98 ಕೋಟಿ ಪಾವತಿಸಲು ಬಾಕಿ ಇರುತ್ತದೆ. ಕಬ್ಬು ಸರಬರಾಜು ಮಾಡಿದ ರೈತರಿಗೆ ಈಗಾಗಲೇ ₹ 7853.58 ಕೋಟಿ ಹಣ ಪಾವತಿಯಾಗಿರುತ್ತದೆ.

ಇ) ಇದಲ್ಲದೆ ಸರ್ಕಾರಕ್ಕೆ 2013–14 ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ₹ 563.87 ಕೋಟಿಗಳಷ್ಟು ಹಣವನ್ನು ಸರ್ಕಾರದಿಂದ ಹೆಚ್ಚುವರಿ ಪ್ರೋತ್ಸಾಹ ಧನವನ್ನಾಗಿ ಪಾವತಿಸಿರುತ್ತದೆ. ಇದರಿಂದಾಗಿ ರಾಜ್ಯದ ಕಬ್ಬು ಬೆಳೆಗಾರ ರೈತರಿಗೆ ಸಾಲ ಮರು ಪಾವತಿ ಮಾಡಿ ಹೊಸದಾಗಿ ಸಾಲ ಪಡೆಯಲು ಕಷ್ಟ ಸಾಧ್ಯವಾಗಲಾರದು ಎಂದು ಭಾವಿಸಲಾಗಿದೆ. ಇದಲ್ಲದೆ ಬಾಕಿ ಇರುವ ಕಬ್ಬಿನ ಹಣವನ್ನು ಸಹ ರೈತರಿಗೆ ಸಕ್ಕರೆ ಕಾರ್ಖಾನೆಗಳಿಂದ ಕೊಡಿಸುವ ಕ್ರಮ ಕೈಗೊಳ್ಳಲಾಗಿದೆ.

ಮಾನ್ಯ ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 955ಕ್ಕೆ ದಿನಾಂಕ 19/12/2014ರಂದು ನೀಡಲಾದ ಉತ್ತರದ ಅನುಬಂಧ–I

ರಾಜ್ಯದ ಸರ್ಕಾರಿ, ಸಹಕಾರಿ ಮತ್ತು ಖಾಸಗಿ ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಸರಬರಾಜು ಮಾಡಿದ ಕಬ್ಬು ಬೆಳಗಾರರಿಗೆ ಬರಬೇಕಾದ ಬಾಕಿ ಹಣ

2013–14ನೇ ಸಾಲಿನಲ್ಲಿ ಕಬ್ಬು ನಿಯಂತ್ರಣ ಮಂಡಳಿ ನಿರ್ಣಯದಂತೆ ಪ್ರತಿ ಮೆ.ಟನ್ ಕಬ್ಬಿಗೆ ರೂ.2500 ದರದಂತೆ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿತ ರೈತರಿಗೆ ಪಾವತಿಸಬೇಕಾದ ಬಾಕಿ ಮೊತ್ತ

(AS ON 30-11-2014)

SL NO	NAME OF THE FACTORY	District	Total Sugar cane crushed (in MTs)	Amount Payable @ Rs.2500/MT fixed by the GOK	Amount paid		Balance	
					At Rs./ MT	Amount Rs. in lakhs	At Rs./ MT	Amount (Rs. in lakhs)
I	**PUBLIC SECTOR**							
1	MPM SUGARS	Shimoga	253854	6346	2500	6346	0	0
2	MYSUGAR	Mandya	223409	5585	2500	5585	0	0
	TOTAL		477263	11931		11931		0
II	**CO-OPERATIVE SECTOR**							
3	SOMESHWARA SSK	Belgaum	208018	5200	1800	3744	700	1456
4	BIDAR SSK	Bidar	418558	10464	1850	7743	650	2721
5	NARANJA SSK	Bidar	500616	12515	1850	9261	650	3254
6	MAHATHMA GANDHI SSK	Bidar	525684	13142	1850	9725	650	3417
7	GHATAPRABHA SSK	Belgaum	360638	9016	2000	7213	500	1803
8	MALAPRABHA SSK	Belgaum	345702	8643	2000	6914	500	1729
9	RAITHARA SSK	Bagalkot	544193	13605	2000	10884	500	2721
10	HIRANYAKESHI SSK	Belgaum	780976	19524	2100	16400	400	3124
11	NANDI SSK	Bijapur	844650	21116	2125	17949	375	3167
12	HALASIDANATHA SSK	Belgaum	255103	6378	2151	5487	349	891
13	DOODAGANGA KRISHNA SSK	Belgaum	836695	20917	2250	18826	250	2092
14	KRISHNA SSK	Belgaum	611525	15288	2350	14371	150	917
15	PANDAVAPUR SSK	Mandya	130462	3262	2500	3262	0	0
	TOTAL		6362820	159070		131779		27291
III	**PRIVATE & CO-OPERATIVE LEASED SECTOR**							
16	BHAVANI SUGARS	Bidar	50289	1257	1650	830	850	427
17	SHIVASAGAR	Belgaum	261528	6538	1773	4637	727	1901
18	DYANAYOGI SUGARS	Bijapur	340133	8503	1800	6122	700	2381
19	INDIAN SUGAR MANUFACTURING CO. LTD.	Bijapur	443250	11081	1800	7979	700	3103
20	JAMAKHANDI SUGARS-(Unit-2)	Bijapur	520891	13022	1800	9376	700	3646
21	KPR SUGAR	Bijapur	768316	19208	1800	13830	700	5378
22	MANALI SUGARS LTD.	Bijapur	282773	7069	1800	5090	700	1979
23	VIJAYANAGARA (Lessee of Mrudagiri Sugars SSK)	Gadag	614853	15371	1800	11067	700	4304

SL NO	NAME OF THE FACTORY	District	Total Sugar cane crushed (in MTs)	Amount Payable @ Rs.2500/MT fixed by the GOK	Amount paid		Balance	
					At Rs./ MT	Amount Rs. in lakhs	At Rs./ MT	Amount (Rs. in lakhs)
24	GM SUGARS (Lessee of Karnataka SSK)	Haveri	395251	9881	1800	7115	700	2767
25	NSL SUGARS (Lessee of Aland SSK)	Gulbarga	733921	18348	1800	13211	700	5137
26	RENUKA SUGARS (Havalaga)	Gulbarga	1003320	25083	1800	18060	700	7023
27	UGAR SUGARS (Jewargi)	Gulbarga	404849	10121	1800	7287	700	2834
28	COREGREEN SUGAR & FUELS PVT. LTD	Yadagiri	664127	16603	1800	11954	700	4649
29	ATHANI FARMERS	Belgaum	619867	15497	2000	12397	500	3099
30	LAILA SUGARS (Lessee of Bhagyalakshmi SSK)	Belgaum	336494	8412	2000	6730	500	1682
31	GOKAK SUGARS	Belgaum	487300	12183	2000	9746	500	2437
32	RENUKA SUGAR S (Lessee of Raibhag SSK)	Belgaum	246097	6152	2000	4922	500	1230
33	RENUKA SUGAR S (Burlatti)	Belgaum	1045980	26150	2000	20920	500	5230
34	RENUKA SUGARS (Manoli)	Belgaum	1229170	30729	2000	24583	500	6146
35	SATISH SUGARS	Belgaum	1457856	36446	2000	29157	500	7289
36	SHIRAGUPPI SUGARS WORKS	Belgaum	455005	11375	2000	9100	500	2275
37	SOUBHAGYALSKHMI SUGARS	Belgaum	510524	12763	2000	10210	500	2553
38	VISHWARAJ SUGAR INDUSTRIES LTD.	Belgaum	791436	19786	2000	15829	500	3957
39	BILAGI SUGARS	Bagalkot	445163	11129	2000	8903	500	2226
40	GEM SUGARS	Bagalkot	800661	20017	2000	16013	500	4003
41	GODAVARI SUGARS	Bagalkot	2045758	51144	2000	40915	500	10229
42	INDIAN CANE POWER LTD.	Bagalkot	1150096	28752	2000	23002	500	5750
43	JAMAKHANDI SUGARS	Bagalkot	747197	18680	2000	14944	500	3736
44	NIRANI SUGARS	Bagalkot	1837951	45949	2000	36759	500	9190
45	PRABULINGESWARA SUGARS	Bagalkot	1172534	29313	2000	23451	500	5863
46	SADASHIVA SUGARS	Bagalkot	768014	19200	2000	15360	500	3840
47	PARRYS SUGAR INDUSTRIES (Lessee of Dhanlakshmi SSK)	Belgaum	555165	13879	2100	11658	400	2221
48	UGAR SUGARS (Ugarkhurd)	Belgaum	1320081	33002	2100	27722	400	5280
49	PARRYS SUGAR INDUSTRIES (Haliyal)	Uttara Kannada	607366	15184	2100	12755	400	2429
50	CHAMUNDESHWARI SUGARS (Lessee of Hemavathi SSK)	Hassan	212384	5310	2100	4460	400	850

SL NO	NAME OF THE FACTORY	District	Total Sugar cane crushed (in MTs)	Amount Payable @ Rs.2500/MT fixed by the GOK	Amount paid		Balance	
					At Rs./ MT	Amount Rs. in lakhs	At Rs./ MT	Amount (Rs. in lakhs)
51	SHIVSHAKTI SUGARS	Belgaum	414012	10350	2150	8901	350	1449
52	VENKATESWARA POWER PROJECT	Belgaum	704645	17616	2200	15502	300	2114
53	NSL (TUNGABHADRA) SUGARS	Bellary	280563	7014	2300	6453	200	561
54	DAVANAGERE SUGARS	Davana-gere	454549	11364	2300	10455	200	909
55	SHAMANUR SUGARS	Davana-gere	345081	8627	2300	7937	200	690
56	ISR SUGARS	Bellary	238514	5963	2333	5565	167	398
57	CHAMUNDESWARI SUGARS	Mandya	601787	15045	2400	14443	100	602
58	COROMANDAL SUGARS (ICL)	Mandya	701590	17540	2400	16838	100	702
59	NSL SUGARS (SCM SUGARS)	Mandya	736423	18411	2400	17674	100	736
60	BANNARI AMMAN SUGARS	Mysore	1671431	41786	2500	41786	0	0
	TOTAL		31474195	786853		641648		145205
	GRAND TOTAL (I+II+II)		38314278	957854		785358		172496

Cane Bill arrears for the previous years (Rs. in lakhs)

Sl. No.	Name of the factory	Year	Amount		
1	BHADRA SSK	2010-2011		24.01	
2	BIDAR SSK	2011-2012		224.00	
3	ISR SUGAR FACTORY	2002-2003	192.49		
		2003-2004	75.40		
		2006-2007	640.56		
		2012-2013	15.00	923.45	
4	KEDARNATH SUGARS	2010-2011		1446.00	
5	SPR SUGARS	2011-2012		382.00	2999
	GRAND TOTAL				175498

Commissioner for Cane
Development and Director of Sugar